ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 12–04–2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | "ಕರ್ನಾಟಕ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸುಸ್ಥಿರ ಮಾರುಕಟ್ಟೆ ಹಾಗೂ ಲಾಭದಾಯಕ ಬೆಲೆ– ಒಂದು ಸಮಾಲೋಚನೆ" ಕಾರ್ಯಕ್ರಮ | 13–04–2016 ಬುಧವಾರ ಬೆಳಿಗ್ಗೆ 10–00 ಗಂಟೆಗೆ | ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ. |
| 2. | ಪತ್ರಿಕಾಗೋಷ್ಠಿ: ಹೆಚ್. ಆಂಜನೇಯ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು | 13–04–2016 ಬುಧವಾರ ಮಧ್ಯಾಹ್ನ 1–00 ಗಂಟೆಗೆ | ಕೊಠಡಿ ಸಂಖ್ಯೆ 334 ಸಮ್ಮೇಳನ ಸಭಾಂಗಣ ಮೂರನೇಮಹಡಿ ವಿಧಾನ ಸೌಧ ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಸಚಿವ ಸಂಪುಟ ಸಭೆ

ಬೆಂಗಳೂರು, ಏಪ್ರಿಲ್ 12 (ಕರ್ನಾಟಕ ವಾರ್ತೆ)

ಸಚಿವ ಸಂಪುಟದ 2016 ನೇ ಸಾಲಿನ 6 ನೇ ಸಭೆಯನ್ನು ಏಪ್ರಿಲ್ 20 ರಂದು ಬೆಳಿಗ್ಗೆ 10–00 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟದ ಸಭಾಮಂದಿರದಲ್ಲಿ ಕರೆಯಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಕವನ/ಕೆಎಂ

# ಆರ್.ಟಿ.ಇ.: ಮಾಹಿತಿ ನೀಡಲು ಮನವಿ

ಬೆಂಗಳೂರು, ಏಪ್ರಿಲ್ 12 (ಕರ್ನಾಟಕ ವಾರ್ತೆ)

2016–17 ನೇ ಸಾಲಿನಲ್ಲಿ ಆರ್.ಟಿ.ಇ. ಕೋಟಾದಡಿ ಆನ್‌ಲೈನ್ ಮೂಲಕ ಸ್ವೀಕರಿಸಲಾಗಿರುವ ಅರ್ಜಿಗಳಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಲು ಪೋಷಕರಿಗೆ ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ನೀಡಲಾಗಿತ್ತು. ಆದರೂ ಸಹಾ ಬಹುತೇಕ ಪೋಷಕರು ಲೋಪದೋಷಗಳನ್ನು ಸರಿಪಡಿಸಿರುವುದಿಲ್ಲ. ತಂತ್ರಾಂಶದಲ್ಲಿ ಲೋಪದೋಷಗಳನ್ನು ಸರಿಪಡಿಸಲು ಮತ್ತೊಮ್ಮೆ ಏಪ್ರಿಲ್ 15 ರ ವರೆಗೆ ಅವಕಾಶ ನೀಡಲಾಗಿದೆ. ವೆಬ್‌ಸೈಟ್ ಐ.ಪಿ. ವಿಳಾಸ **http://202.138.101.21/schregrte/RTE2015/RTEUpdate Login.aspx** ಇದಕ್ಕೆ ಭೇಟಿ ನೀಡಿ ತಿದ್ದುಪಡಿ ಮಾಡಿಕೊಳ್ಳಬಹುದಾಗಿದೆ. ಪೋಷಕರು ಈ ಅವಕಾಶವನ್ನು ತಪ್ಪದೆ ಸದುಪಯೋಗಪಡಿಸಿಕೊಳ್ಳಲು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕವನ/ಕೆಎಂ

## ಸಮಾಜ ಕಲ್ಯಾಣ ಸಚಿವರ ಗ್ರಾಮ ವಾಸ್ತವ್ಯ

ಬೆಂಗಳೂರು, ಏಪ್ರಿಲ್ 12 (ಕರ್ನಾಟಕ ವಾರ್ತೆ)

ಮಂಗಳೂರಿನ ಮುಲ್ಕಿ ಹೋಬಳಿಯ ಪಡಪೆಣಂಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ "ಕೆರೆಕಾಡು ಕೊರಗರ ಕಾಲೋನಿ" ಹಾಗೂ ಸುತ್ತಮುತ್ತಲ ಗಿರಿಜನ ಹಾಡಿಗಳಿಗೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ಏಪ್ರಿಲ್ 15 ರಂದು ಭೇಟಿ ನೀಡಿ ಅವರ ಕುಂದುಕೊರತೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಸೂಚಿಸುವರು. ವಿವಿಧ ಇಲಾಖೆ/ನಿಗಮಗಳಿಂದ ನೀಡಬಹುದಾದ ಸವಲತ್ತುಗಳನ್ನು ವಿತರಿಸಿ, ಕೆರೆಕಾಡು ಕೊರಗರ ಕಾಲೋನಿಯಲ್ಲಿ ಅಂದು ರಾತ್ರಿ ವಾಸ್ತವ್ಯ ಮಾಡುವರು.

ಕವನ::ಜಿಪಿಆರ್

## ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸುಸ್ಥಿರ ಮಾರುಕಟ್ಟೆ ಹಾಗೂ ಲಾಭದಾಯಕ ಬೆಲೆ ಒಂದು ಸಮಾಲೋಚನೆ

ಬೆಂಗಳೂರು, ಏಪ್ರಿಲ್ 12 (ಕರ್ನಾಟಕ ವಾರ್ತೆ)

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಹಿರಿಯ ವಿದ್ಯಾರ್ಥಿಗಳ ಸಂಘ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಕರ್ನಾಟಕ ಕೃಷಿ ಬೆಲೆ ಆಯತೋಗ, ಬೆಂಗಳೂರು ಹಾಗೂ ಭಾರತೀಯ ವಿಸ್ತರಣಾ ಶಿಕ್ಷಣ ಸಂಘ (ಕ.ಘಟಕ) ಇವರ ಸಂಯುಕ್ತ ಆಶ್ರಯದಲ್ಲಿ "ಕರ್ನಾಟಕ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸುಸ್ಥಿರ ಮಾರುಕಟ್ಟೆ ಹಾಗೂ ಲಾಭದಾಯಕ ಬೆಲೆ–ಒಂದು ಸಮಾಲೋಚನೆ" ಕಾರ್ಯಕ್ರಮವನ್ನು ದಿನಾಂಕ 13–04–2016 ರಂದು ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳದಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಜರುಗಲಿದೆ.

ಹುಲಿ ಬೆಳೆ ಆಯೋಗ ಶಿಫಾರಸ್ಸು ಮಾಡಿದ ವರದಿಯನ್ನು ಡಾ. ಟಿ. ಎನ್. ಪ್ರಕಾಶ್, ಅಧ್ಯಕ್ಷರು ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು ಹಾಗೂ ಹನುಮನಗೌಡ, ಬೆಳಗುರ್ಕಿ, ರೈತ ಸದಸ್ಯರು, ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು ಇವರು ಮಂಡಿಸಲಿದ್ದಾರೆ. ಡಾ. ಹೆಚ್. ಶಿವಣ್ಣ, ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಬೆಂಗಳೂರು ಕೃಷಿ ವಿಶ್ವಿದ್ಯಾನಿಲಯದಲ್ಲಿ ಕೃಷಿ ಬೆಳೆಗಳ ಸುಸ್ಥಿರ ಬೆಲೆ ಬಗ್ಗೆ ಚಿಂತನೆ ಹಾಗೂ ಶಿಫಾರಸ್ಸುಗಳು ಬಗ್ಗೆ ಮಂಡಿಸಲಿದ್ದಾರೆ. ಡಾ. ಡಿ. ಎಲ್.

ಮಹೇಶ್ವರ್, ಕುಲಪತಿಗಳು, ತೋಟಗಾರಿಕಾ ವಿಶ್ವವಿದ್ಯಾನಿಲಯ, ಬಾಗಲಕೋಟೆ. ಇವರು ಬಾಗಲಕೋಟೆ ವಿಶ್ವವಿದ್ಯಾನಿಲಯದಲ್ಲಿ ತೋಟಗಾರಿಕೆ ಬೆಳೆಗಳ ಸುಸ್ಥಿರ ಬೆಲೆ ಬಗ್ಗೆ ಚಿಂತನೆ ಹಾಗೂ ಶಿಫಾರಸ್ಸುಗಳ ಬಗ್ಗೆ ಮಂಡಿಸಲಿದ್ದಾರೆ. ಪದ್ಮಭೂಷಣ ಡಾ. ಎಂ. ಮಹದೇವಪ್ಪ, ಮಾಜಿ ಅಧ್ಯಕ್ಷರು, ವಿಜ್ಞಾನಿಗಳ ಕೃಷಿ ಆಯ್ಕೆ ಮಂಡಲಿ, ನವದೆಹಲಿ ಇವರು ಅಧ್ಯಕ್ಷರ ಪ್ರಾಸ್ತಾವಿಕ ನುಡಿ ನಡೆಸಿಕೊಂಡಲಿದ್ದಾರೆ. ಡಾ. ಕು. ನಾರಾಯಣಗೌಡ, ಅಧ್ಯಕ್ಷರು, ಹಿರಿಯ ವಿದ್ಯಾರ್ಥಿಗಳ ಸಂಘ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಕಾರ್ಯಕ್ರಮದ ಪರಿಚಯ ಮಾಡಿಕೊಡಲಿದ್ದಾರೆ.

ಕವನ::ಜಿಪಿಆರ್

## ನಾಳೆಯಿಂದ ಕೈಮಗ್ಗ ಉತ್ಪನ್ನಗಳ ಮಾರಾಟ ಮೇಳ

ಬೆಂಗಳೂರು, ಏಪ್ರಿಲ್ 12 (ಕರ್ನಾಟಕ ವಾರ್ತೆ)

ಕೈಮಗ್ಗ ಉತ್ಪನ್ನಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ, ಕೈಮಗ್ಗ ಮತ್ತು ಜವಳಿ ಇಲಾಖೆಯು ಏಪ್ರಿಲ್ 13 ರಿಂದ 16 ರವರೆಗೆ 4 ದಿನಗಳ ಕಾಲ, ಕೈಮಗ್ಗ ಉತ್ಪನ್ನಗಳ ಮಾರಾಟ ಮೇಳವನ್ನು ನಗರದ ಯಲಹಂಕ ಸಂತೆ ಸರ್ಕಲ್ ಬಳಿ ಇರುವ ಬಿಡಿಕೆ ಕಲ್ಯಾಣ ಮಂಟಪದಲ್ಲಿ ಕೈಮಗ್ಗ ಕ್ಲಸ್ಟರ್ ಆಯೋಜಿಸಿದೆ.

ಆಸಕ್ತರು, ಮೇಳದಲ್ಲಿ ಭಾಗವಹಿಸಿ, ಸದುಪಯೋಗ ಪಡೆದುಕೊಳ್ಳಬಹುದು ಎಂದು ಬೆಂಗಳೂರು ನಗರ ಕೈಮಗ್ಗ ಜವಳಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಲವಿ/ಮಂಜುನಾಥ ಡೊಳ್ಳಿನ್/ಕೆಎಂ

## ಆನ್‌ಲೈನ್ ಮೂಲಕ ಜಾತಿ, ಆದಾಯ ಇತರೆ ಸರ್ಕಾರಿ ಪ್ರಮಾಣ ಪತ್ರ

ಬೆಂಗಳೂರು, ಏಪ್ರಿಲ್ 12 (ಕರ್ನಾಟಕ ವಾರ್ತೆ)

ಜಾತಿ, ಆದಾಯ ಮತ್ತು ಇತರೆ ಸರ್ಕಾರಿ ಪ್ರಮಾಣ ಪತ್ರಗಳಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಆನ್‌ಲೈನ್ ಮೂಲಕವೇ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಕಂದಾಯ ಇಲಾಖೆ ಮಾಡಿದೆ.

ಮನೆಯಲ್ಲಿಯೇ ಅಥವಾ ಸೈಬರ್‌ಕೆಫೆಗಳಲ್ಲಿ ಕುಳಿತು **www.nadakacheri.karnataka.gov.in** ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿಯ ಪ್ರಗತಿಯನ್ನು ತಿಳಿಯುವ ಹಾಗೂ ಪ್ರಮಾಣ ಪತ್ರವನ್ನು ಮುದ್ರಿಸಿಕೊಳ್ಳುವ ಅವಕಾಶವನ್ನು ಮಾಡಲಾಗಿದೆ.

ಮಂಜುನಾಥ.

# ದೂರದರ್ಶನ ಸ್ಟ್ರಿಂಜರ್: ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು, ಏಪ್ರಿಲ್ 12 (ಕರ್ನಾಟಕ ವಾರ್ತೆ)

ದೂರದರ್ಶನ ಬೆಂಗಳೂರು ಕೇಂದ್ರದ ಪ್ರಾದೇಶಿಕ ಸುದ್ದಿ ವಿಭಾಗವು ರಾಜ್ಯದ 30 ಜಿಲ್ಲಾ ಕೇಂದ್ರಗಳಲ್ಲಿ ಸ್ಟ್ರಿಂಜರ್‌ಗಳಾಗಿ ಕಾರ್ಯನಿರ್ವಹಿಸಲು ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಸುದ್ದಿ ದೃಶ್ಯಾವಳಿ ಚಿತ್ರೀಕರಣ ಹಾಗೂ ವರದಿಗಾರಿಕೆಯಲ್ಲಿ ಅನುಭವ ಹಾಗೂ ಪರಿಣಿತಿ ಇರುವವರು ದಿನಾಂಕ ಮೇ 13, 2016 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆ ಅರ್ಹತೆ ಮಾನದಂಡಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಜಾಲತಾಣ www.ddchandana.gov.in ನ್ನು ನೋಡಬಹುದು.

ಅಶೋಕ್‌ಕುಮಾರ್ ಡಿ